ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:509/2025
ಸಿ.ಡಬ್ಲ್ಯು 10 ಪಿ.ಡಬ್ಲೂ : 3

| | |
|---|---|
| ಸಾಕ್ಷಿದಾರರ ಹೆಸರು | ಶಿವರಾಮ್ |
| ತಂದೆಯ ಹೆಸರು | ಕರಿಯ ಪೂಜಾರಿ |
| ವಯಸ್ಸು | 50 ವರ್ಷ |
| ಉದ್ಯೋಗ | ರಿಕ್ಷಾ ಚಾಲಕ |
| ವಾಸಸ್ಥಳ | ಉಚ್ಚಿ ಲ |

ದಿನಾಂಕಃ 11-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಸಾಕ್ಷಿಯವರು 3 ದಾಖಲೆಗಳನ್ನು ನೋಡಿ ಅವುಗಳಲ್ಲಿ ತಮ್ಮ ಸಹಿ ಇದೆ ಎಂದು ಗುರುತಿಸಿದ್ದು ಸದರಿ ದಾಖಲೆಗಳು ಸ್ಥಳ ಪಂಚನಾಮೆ, ಸ್ಥಳ ದ ಕಚ್ಚಾ ನಕ್ಷೆ, ಸ್ವತ್ತು ಸ್ವಾಧೀನ ಮಹಜರು ಆಗಿರುತ್ತದೆ ಅವುಗಳನ್ನು ಈಗಾಗಲೇ ನಿಪಿ. 2,3 ಮತ್ತು 5 ಎಂದು ಗುರುತಿಸಲಾಗಿದೆ. ಸಾಕ್ಷಿಯವರ ಸಹಿಯನ್ನು ನಿಪಿ.2 ಬಿ, 3 ಬಿ, ಮತ್ತು 5 ಬಿ ಎಂದು ಗುರುತಿಸಲಾಯಿತು. ದಿಃ 20-12-2024 ರಂದು ಅವುಗಳಿಗೆ ನಾನು ಸಹಿ ಮಾಡಿರುತ್ತೇನೆ. ನಿಪಿ 2 ಮತ್ತು 3 ಕ್ಕೆ ನಾನು ಉಚ್ಚಿಲದಲ್ಲಿ ಅಪಘಾತವಾಗಿದ್ದ ಸ್ಥಳ ದಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಯವರು ಒಂದು ಭಾವಚಿತ್ರವನ್ನು ನೋಡಿ ಇದನ್ನು ಅಪಘಾತ ವಾದ ಸ್ಥಳ ದಲ್ಲಿ ತೆಗೆಸಿರುತ್ತಾರೆ ಎಂದು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ. 4 ಎಂದು ಗುರುತಿಸಲಾಗಿದೆ. ನಿಪಿ 5 ಕ್ಕೆ ನಾನು ಬಸ್ಸನ್ನು ಸ್ವಾಧೀನಪಡಿಸಿಕೊಳ್ಳುವ ಕಾಲದಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಯವರು 2 ಭಾವಚಿತ್ರಗಳನ್ನು ನೋಡಿ ಇದರಲ್ಲಿ ಕಾಣುವ ಬಸ್ಸನ್ನೇ ಅಮಾನತು ಪಡಿಸಿಕೊಂಡಿರುವುದದು ಎಂದು ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ. 6 ಮತ್ತು 7 ಎಂದು ಗುರುತಿಸಲಾಗಿದೆ

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ. ಎನ್ ಎಸ್ ವಕೀಲರಿಂದಃ**

ಅಪಘಾತವಾಗಿದೆ ಎಂದು ಹೇಳುವ ಸ್ಥಳ ಕ್ಕೆ ನಿಮ್ಮನ್ನು ಯಾರು ಬರಲು ಹೇಳಿದ್ದರು ಎಂದರೆ ಮೃತ ವ್ಯಕ್ತಿಯ ಮನೆಯವರು ಬರಲು ಹೇಳಿದ್ದರು. ನೀವು ಆ ದಿನ ಪಡುಬಿದ್ರ ಠಾಣೆಗೆ ಹೋಗಿರುತ್ತೀರಾ ಎಂದರೆ ಇಲ್ಲ. ನೀವು ಉಚ್ಚಿಲಕ್ಕೆ ಎಷ್ಟು ಗಂಟೆಗೆ ಹೋಗಿರುತ್ತೀರಿ ಎಂದರೆ ಸಂಜೆ 5.15 ರ ಸಮಂಯಕ್ಕೆ ಹೋಗಿರುತ್ತೇನೆ. ಎಷ್ಟು ಸಮಯಅಲಿಲ ಇರುತ್ತೀರಿ ಎಂದರೆ ಸುಮಾರು 45 ನಿಮಿಷ ಇದ್ದೆನು. ನೀವು ಸಗಿ ಮಾಡಿರುತ್ತೇನೆ ಎಂದು ಹೇಳುವ ದಾಖಲೆಗಳನ್ನು ನೀವು ಹೋಗುವ ವೇಳೆಗೆ ಬರೆದು ಆಗಿತ್ತೇ ಎಂದರೆ ನಾನು ಹೋದ ನಂತರ ಬರೆದರು. ನಿಪಿ 2 ಮತ್ತು 3 ನ್ನು ಪೊಲೀಸಿನವರು ಬರೆದರು ಅವರ ಹೆಸರು ಗೊತ್ತಿಲ್ಲ. ಆ ವೇಳೆ ಎಷ್ಟು ಮಂದಿ ಇದ್ದರು ಎಂದರೆ ನಾನು ಮತ್ತು ದೂರು ನೀಡಿದವರು ಇದ್ದೆವು. ರಾ, ಹೆದ್ದಾರಿಯಲ್ಲಿ ಜೀಪನ್ನು ನಿಲ್ಲಿಸಿ ಬರೆದಿರುತ್ತಾರೆಯೇ ಎಂದರೆ ಠಾಣೆಯಲ್ಲಿ ಬರೆದಿರುತ್ತಾರೆ. ನೀವು ಸಹ ಠಾಣೆಯಲ್ಲಿಯೇ ಸಹಿ ಮಾಡಿರುತ್ತೀರಾ ಎಂದರೆ ಹೌದು.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.